3. ವಿಶ್ವಾಸ ಮತ ಯಾಚನಾ ಪ್ರಸ್ತಾವ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ.

"ಈ ಸದನವು ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ"

(ಗೊಂದಲ)

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಯಿತು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಮಾನವೇ ಅಂತಿಮ. ಅದೇ ರೀತಿ ಸಂವಿಧಾನಾತ್ಮಕ ಸಂಸ್ಥೆಯಾದಂತಹ ವಿಧಾನ ಸಭೆ ಶ್ರೇಷ್ಠ ಮತ್ತು ಪವಿತ್ರ ಎಂಬ ನಂಬಿಕೆ ಇಟ್ಟು ನಾವು ಕೆಲಸ ಮಾಡುತ್ತಿದ್ದೇವೆ. 2008ರಲ್ಲಿ ಕರ್ನಾಟಕ ಜನತೆ ಅತಿ ಹೆಚ್ಚಿನ ಸ್ಥಾನಗಳನ್ನು ಬಿ.ಜೆ.ಪಿ ಪಕ್ಷಕ್ಕೆ ಕೊಟ್ಟು ಸರ್ಕಾರ ನಡೆಸಲಿಕ್ಕೆ ತೀರ್ಮಾನವನ್ನು ಕೊಟ್ಟಿದ್ದಾರೆ. ತದನಂತರ ನಡೆದ ಲೋಕಸಭೆ, ವಿಧಾನ ಸಭೆ ಉಪ ಚುನಾವಣೆಗಳು, ಜಿಲ್ಲಾ ಪಂಚಾಯಿತಿ, ತಲ್ಲೂಕು ಪಂಚಾಯಿತಿ ಮತ್ತು ಇನ್ನಿತರ ಸಹಕಾರ ಸಂಸ್ಥೆಗಳ ಚುನಾವಣೆಗಳಲ್ಲಿ ಜನತೆ ನಮ್ಮ ಪಕ್ಷದ ಪರವಾಗಿ ತೀರ್ಪನ್ನು ಕೊಟ್ಟಿರುತ್ತಾರೆ. ವಿಧಾನಸಭೆಯಲ್ಲಿ ನಿರಂತರವಾಗಿ ನಮ್ಮ ಬಹುಮತವನ್ನು ಸ್ಥಾಪಿಸುತ್ತಾ ಬಂದಿದ್ದೇವೆ. ಇದಲ್ಲದೆ ಕಳೆದ ಮೂರೂ ವರ್ಷಗಳಲ್ಲಿ ಎರಡೂ ಸದನಗಳೂ ನಾನು ಮಂಡಿಸಿದ ಬಜೆಟ್ ಹಾಗೂ ಹಣಕಾಸು ವಿಧೇಯಕಗಳನ್ನು ಬೆಂಬಲಿಸುತ್ತಾ ಬಂದಿವೆ. ಸರ್ಕಾರ ಬಂದ ಮೊದಲನೆಯ ದಿನದಿಂದಲೇ ವಿರೋಧ ಪಕ್ಷಗಳು ಮೊದಲು ಸರ್ಕಾರ ನಂತರ ಪಕ್ಷದಲ್ಲಿ ಒಡಕನ್ನುಂಟು ಮಾಡಿ, ಅಸ್ಥಿರತೆಗೊಳಿಸುವ ನಿರಂತರ ಪ್ರಯತ್ನಗಳನ್ನು ಮಾಡುತ್ತಾ ಬಂದಿರುವುದು ನಾಡಿನ ಜನತೆಗೂ ಗೊತ್ತಿದೆ. ಇದೆಲ್ಲದರ ನಡುವೆಯೂ ನನ್ನ ಸರ್ಕಾರ ಬಹುಮತ ಹೊಂದಿರುವ ಒಂದು ಸ್ಥಿರವಾದಂತಹ ಸರ್ಕಾರವಾಗಿದೆ. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ರಾಷ್ಟ್ರದಲ್ಲಿಯೇ ಅತ್ಯಂತ ಶ್ರೇಷ್ಠವಾಗಿದೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಸದೃಢವಾಗಿದೆ. ಕೃಷಿ, ಕೈಗಾರಿಕೆ, ವಿದ್ಯುತ್, ನೀರಾವರಿ, ರಸ್ತೆಗಳು ಮತ್ತು ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಕಳೆದ ಮೂರು ವರ್ಷಗಳಲ್ಲಿ ದೊಡ್ಡ ಸಾಧನೆಯಾಗಿದೆ. ಎಲ್ಲಾ ವರ್ಗದ ಅಭಿವೃದ್ಧಿ ಮಾಡುವುದರ ಮುಖಾಂತರ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದೇನೆ. ಕೇಂದ್ರ ಸರ್ಕಾರ ನೀಡಿರುವ ಪ್ರಶಸ್ತಿಯೇ ಇದಕ್ಕೆ ಸಾಕ್ಷಿಯಾಗಿದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಒಂದೇ ವಾರದಲ್ಲಿ ಎರಡು ಬಾರಿ ಬಹುಮತವನ್ನು ಸಾಬೀತು ಮಾಡಿದ್ದು, ಮಾನ್ಯ ರಾಜ್ಯಪಾಲರು ಮತ್ತು ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ಕೊಟ್ಟಿದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ಸುಪ್ರೀಂಕೋರ್ಟ್ ತೀರ್ಪು ಬಂದ ಮೇಲೆ ಬಿ.ಜೆ.ಪಿ.ಯ ಎಲ್ಲಾ 11 ಶಾಸಕರೂ ನಮ್ಮ ಸರ್ಕಾರದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿ ಲಿಖಿತ ಮೂಲಕ ಮಾನ್ಯ ರಾಜ್ಯಪಾಲರಿಗೆ ತಿಳಿಸಿದ್ದಾರೆ. ಆದಾಗ್ಯೂ ಮಾನ್ಯ ರಾಜ್ಯಪಾಲರು ರಾಜ್ಯ ಸರ್ಕಾರವನ್ನು ವಜಾಗೊಳಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಆದರೆ ಕೇಂದ್ರ ಸರ್ಕಾರ ಅದನ್ನು ತಿರಸ್ಕರಿಸಿದೆ. ಇಷ್ಟೆಲ್ಲಾ ಆದರೂ ಕೂಡ ವಿರೋಧ ಪಕ್ಷಗಳು ಜನತೆಯಲ್ಲಿ ಗೊಂದಲ ಉಂಟು ಮಾಡುವ ಪ್ರಯತ್ನಗಳನ್ನು ಮಾಡುತ್ತಿವೆ. ಇದನ್ನು ಕೊನೆಗೊಳಿಸಲು ಮತ್ತು ರಾಜ್ಯದ ಜನತೆಗೆ ತಾವು ವಿಶ್ವಾಸದಿಂದ ಆಯ್ಕೆ ಮಾಡಿದಂತಹ ಸರ್ಕಾರ ಸಂಪೂರ್ಣ ಬಹುಮತ ಹೊಂದಿದ್ದು, ಸ್ಥಿರವಾಗಿದೆ ಮತ್ತು ಮುಂದಿನ ಎರಡು ವರ್ಷ ದಾಖಲೆಯ ಅಭಿವೃದ್ಧಿ ಮಾಡಿ.....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:– ದೇಶದಲ್ಲೇ ನಮ್ಮ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂಬ ಸಂಕಲ್ಪ ಹೊಂದಿದ್ದೇನೆ. ಇದಕ್ಕಾಗಿ ಎಲ್ಲರ ಸಹಕಾರವನ್ನು ಈ ಸಂದರ್ಭದಲ್ಲಿ ಕೋರುತ್ತಿದ್ದೇನೆ. 'ಇದು ಒಳ್ಳೆಯ ಸರ್ಕಾರ, ಇದಕ್ಕೆ ಬಹುಮತ ಇದೆ' ಎಂದು ಮಾನ್ಯ ರಾಜ್ಯಪಾಲರು ಹೇಳಿದರೂ ಸಹಿತ, ಪ್ರತಿಪಕ್ಷಗಳ ಗೊಂದಲ ಮೂಡಿಸುವ ಪ್ರಯತ್ನದ ಮಧ್ಯೆ, ದೇಶದ ಜನತೆಗೆ, ರಾಜ್ಯದ ಜನತೆಗೆ ನನ್ನ ಸರ್ಕಾರಕ್ಕೆ ಬಹುಮತ ಇದೆ ಎನ್ನುವುದನ್ನು ಸಾಬೀತುಪಡಿಸಲು ನಾನೇ ಸ್ವತಃ voluntary ಯಾಗಿ, ನನ್ನ ಸರ್ಕಾರದ ಮೇಲೆ ವಿಶ್ವಾಸ ವ್ಯಕ್ತಪಡಿಸುವಂತೆ ಈ ಸದನವನ್ನು ಕೋರಿ ನಾನು ಈ ಪ್ರಸ್ತಾವವನ್ನು ಮಂಡನೆ ಮಾಡಿದ್ದೇನೆ. ಆದ್ದರಿಂದ, ತಾವು ಇದಕ್ಕೆ ಅನುಮತಿಯನ್ನು ಕೊಟ್ಟು, ಈ ಬಗ್ಗೆ ಸದನದ ಅಭಿಪ್ರಾಯವನ್ನು ಪಡೆಯಬೇಕೆಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಚರ್ಚೆ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು:– ನೀವು ಚರ್ಚೆ ಮಾಡುವುದಾದರೆ, ಅದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರಸ್ ಪಕ್ಷದ ಸದಸ್ಯರು ಮತ್ತು ಸದನದಲ್ಲಿ ಹಾಜರಿದ್ದ ಪಕ್ಷೇತರ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು:– ಚರ್ಚೆಯಲ್ಲಿ ಯಾರೂ ಭಾಗವಹಿಸದೇ ಇರುವುದರಿಂದ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಈ ಕೆಳಕಂಡಂತೆ ಇದೆ.

"ಈ ಸದನವು ಶ್ರೀ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ"

ಪ್ರಸ್ತಾವದ ಪರವಾಗಿ ಇರುವವರು 'ಹೌದು' ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರ 'ಇಲ್ಲ' ಎಂದು ಸೂಚಿಸಬೇಕು.

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

ಅಧ್ಯಕ್ಷರು:– ಮತ ಎಣಿಕೆಗೆ ಒತ್ತಾಯಿಸುವುದರಿಂದ, ನಾನು ಮತ ಎಣಿಕೆ ಮಾಡುತ್ತೇನೆ. ಈಗ ಸದನದ ಬೆಲ್ ಅನ್ನು ಹಾಕಿ.

(ಈ ಹಂತದಲ್ಲಿ ಸದನದ ಬೆಲ್ ಅನ್ನು ಹಾಕಲಾಯಿತು)

(ಸಭೆಯನ್ನು ವಿಭಜಿಸಲಾಯಿತು)

ಅಧ್ಯಕ್ಷರು:– ಈಗ ಪ್ರಸ್ತಾವದ ಪರವಾಗಿ 119 ಮತಗಳು ಬಂದಿರುತ್ತವೆ, ಪ್ರಸ್ತಾವದ ವಿರೋಧವಾಗಿ ಯಾರಾದೂ ಇದ್ದರೆ ಎದ್ದು ನಿಂತುಕೊಳ್ಳಬಹುದು. ಪ್ರಸ್ತಾವದ ವಿರೋಧವಾಗಿ ಯಾವುದೇ ಮತಗಳು ಇಲ್ಲ. ಪ್ರಸ್ತಾವದ ಪರವಾಗಿ 119 ಮತಗಳು ಬಂದಿರುವುದರಿಂದ ಪ್ರಸ್ತಾವವು ಅಂಗೀಕೃತವಾಗಿದೆ ಎಂದು ಘೋಷಿಸುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, adjournment motion ಚರ್ಚೆಯ ಸಮಯದಲ್ಲಿ ವಿರೋಧಪಕ್ಷದವರು ಅನೇಕ ಅಸಂಸದೀಯ ಪದಗಳನ್ನು ಚೇರ್ ಅನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಸಭೆಗೆ ಶೋಭೆ